ಪಿಡಬ್ಲೂ – 1

<u>ದಿನಾಂಕಃ 04.04.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

<u>ಪಾಟೀ ಸವಾಲುಃ ಶ್ರೀ ಕೆ ಟಿ ಎಸ್ ವಕೀಲರಿಂದ</u>

ದಾವಾ ಪತ್ರವನ್ನು ತಯಾರು ಮಾಡಲು ನನ್ನ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನು ಎಂದರೆ ಸರಿ. ಆ ರೀತಿ ನಾನು ಕೊಟ್ಟ ಮಾಹಿತಿಗಳು ಸರಿಯಾಗಿ ಇದ್ದು ಸದರಿ ಮಾಹಿತಿಯ ಪ್ರಕಾರವೇ ದಾವಾ ಪತ್ರವನ್ನು ತಯಾರು ಮಾಡಲಾಗಿದೆ ಎಂದರೆ ಸರಿ. ನನ್ನ ಗಂಡನ ಹೆಸರು ಯೋಗರಾಜ್ ಇರುತ್ತದೆ. ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ನನ್ನ ಗಂಡನ ತಂದೆಯ ಒಟ್ಟು ಕುಟುಂಬದ ಆಸ್ತಿಯಾಗಿದ್ದು ವಿಭಾಗದ ಮೂಲಕ ದಾವಾ ಆಸ್ತಿಯನ್ನು ನನ್ನ ಗಂಡನ ತಂದೆಯ ಹಿಸ್ಸೆಗೆ ಕೊಡಲಾಗಿತ್ತು. ಸದರಿ ವಿಭಾಗ 23–07–1994 ರಲ್ಲಿ ಆಗಿತ್ತು ಎಂದರೆ ಸರಿ. ಸದರಿ ವಿಭಾಗದಂತೆ ಎಲ್ಲರ ಹೆಸರುಗಳಿಗೂ ತಮ್ಮ ತಮ್ಮ ವಿಭಾಗದ ಆಸ್ತಿಯ ಬಗ್ಗೆ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಅದರ ಮ್ಯೂಟೇಶನ್ ಆದೇಶದ ಸಂಖ್ಯೆ3/95–96 ಇರುತ್ತದೆ ಎಂದರೆ ಸರಿ.

1994 ರಲ್ಲಿ ಆದ ವಿಭಾಗದಲ್ಲಿ ನನ್ನ ಗಂಡನಿಗೆ 1 ಎಕರೆ 20 ಗುಂಟೆ ಹಾಗೂ ನನ್ನ ಗಂಡನ ಅಣ್ಣನಿಗೆ 1 ಎಕರೆ 20 ಗುಂಟೆ ಮತ್ತು ಮಂಜಯ್ಯನವರಿಗೆ 1 ಎಕರೆ ಜಮೀನನ್ನು ಸ.ನಂ 67 ರಲ್ಲಿ ಕೊಡಲಾಗಿದೆ ಎಂದರೆ ಸರಿ. ಮಂಜಯ್ಯನವರು ಸಹ ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರು ತೀರಿಕೊಂಡ ನಂತರ ಅವರಿಗೆ ಕೊಡಲಾಗಿದ್ದ 1 ಎಕರೆ ಜಮೀನಿನ ಖಾತೆ ಅವರ ಹೆಂಡತಿ ದ್ಯಾವಮ್ಮ ನವರ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿ. ಅದರ ಮ್ಯೂಟೇಶನ್ ಆದೇಶ ಸಂಖ್ಯೆ 1/2000–01 ಇರುತ್ತದೆ ಎಂದರೆ ಸರಿ. ಅದರಂತೆ ಸದರಿ ಆಸ್ತಿಯ ಆರ್ ಟಿ ಸಿ ಪಹಣಿಯಲ್ಲಿಯೂ ಸಹ ದ್ಯಾವಮ್ಮ ನವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಮಂಜಯ್ಯನವರ ಜೀವಿತ ಕಾಲದಲ್ಲಿ ಸದರಿ 1

ಎಕರೆ ಜಮೀನನ್ನು ಮಂಜಯ್ಯನವರೇ ಸಾಗು ಮಾಡುತ್ತಿದ್ದರು ಎಂದರೆ ಸರಿ. ಅವರ ಮರಣ ನಂತರ ದ್ಯಾವಮ್ಮ ನವರು ಸದರಿ ಜಮೀನಿನ ಸ್ವಾದೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ದ್ಯಾವಮ್ಮ ನವರು ತಮ್ಮ ಜೀವಿತ ಕಾಲದಲ್ಲಿ ಸದರಿ 1 ಎಕರೆ ಜಮೀನನ್ನು 3 ನೇ ಪ್ರತಿವಾದಿ ಕನ್ನಪ್ಪನವರಿಗೆ ಯೋಗ್ಯ ಬೆಲೆಗೆ ಮಾರಾಟ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಅದರಂತೆ ಕ್ರಯ ಪತ್ರ ಸಹ ಸಾಗರದ ಉಪನೊಂದಣಾಧಿಕಾರಿ ಕಛೇರಿಯಲ್ಲಿ ನೊಂದಣಿ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಯಾವ ಕಾರಣಕ್ಕೆ ಪ್ರತಿವಾದಿಯನ್ನಾಗಿ ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ಆ ನಂತರದಲ್ಲಿ ಕ್ರಯ ಪತ್ರದ ಬಗ್ಗೆ ನಮಗೆ ಗೊತ್ತಾಗಿದ್ದು ಆ ಕಾರಣಕ್ಕೆ ನಾವು ಸದರಿ ಕನ್ನಪ್ಪನವರನ್ನು ಈ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿ ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ.

ನನ್ನ ಗಂಡ ತೀರಿಕೊಂಡ ನಂತರ ನಾನು ನನ್ನ ತವರು ಮನೆಯಲ್ಲಿ ವಾಸ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾನು ಈಗಲೂ ಸಹ ನನ್ನ ಗಂಡನ ಮನೆಯಲ್ಲಿಯೇ ವಾಸ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಗಂಡನ ಮನೆಯಲ್ಲಿ ಈಗ ವಾಸ ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತೀರಿಕೊಳ್ಳುವ ವರೆಗೆ ಅವರು 2 ನೇ ಪ್ರತಿವಾದಿಯೊಂದಿಗೆ ವಾಸ ಮಾಡಿಕೊಂಡಿದ್ದರು ಮತ್ತು 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ನೋಡಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. ಆ ರೀತಿ ನಾನು ನೋಡಿಕೊಳ್ಳುತಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಕಾನೂನು ಬದ್ಧವಾಗಿಯೇ 1 ಎಕರೆ ಜಮೀನನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಜಮೀನಿನ ಖಾತೆ 3 ನೇ ಪ್ರತಿವಾದಿಯ ಹೆಸರಿಗೆ ಇದ್ದು ಅವರೇ ಅದನ್ನು ಸಾಗು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಆ ರೀತಿ ಅವರು ಸಾಗು ಮಾಡುತ್ತಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ದುರ್ವ್ಯಾಜ್ಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಜೆಎಂಎಫ್‌ಸಿ, ಸಾಗರ